೨ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## ಸಿ.ಸಿ. 410/2022

ಸಾಕ್ಷಿದಾರರ ಹೇಳಿಕೆ ಃ

| | | | |
|---|---|---|---|
| ಹೆಸರು | ಃ ಶಂಕರ | ಚಾಸಾಃ **3** | ಪ್ರಾಸಾಃ **3** |
| ತಂದೆಯ ಹೆಸರು | ಃ ಲೇಟ್ ಶಂಭಯ್ಯ | | |
| ವಯಸ್ಸು | ಃ 63 ವರ್ಷ | | |
| ವೃತ್ತಿ | ಃ ನಿವೃತ್ತ ಸರ್ಕಾರಿ ನೌಕರ | | |
| ವಾಸಸ್ಥಳ | ಃ ಮೈಸೂರು | | |

ದಿನಾಂಕಃ **18.08.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01.** ದಿಃ16.09.2021 ರಂದು ದೊಡ್ಡಬ್ಯಾಡರಹಳ್ಳಿ ಗ್ರಾಮ ಸರ್ವೆ ನಂ-56 ಮತ್ತು 57 ರ ಹದ್ದುಬಸ್ತು ಗುರುತಿಸಲು, ತಹಶೀಲ್ದಾರ್, ಇ.ಒ., ಪೊಲೀಸರು, ಸರ್ವೆಯರ್ ಹೋಗಿದ್ದು, ಕಾರ್ಯ ನಿರ್ವಹಿಸುತ್ತಿದ್ದೆವು. ಸರ್ವೆ ನಂ-56 ಮತ್ತು 57 ರ ಬಾಜುದಾರರಾದ ಲಿಂಗರಾಜು, ದೇವರಾಜುರವರು ಹಳತೆ ಮಾಡಬಾರದು ಎಂದು ತಕರಾರು ಮಾಡಿದರು. ಆಗ ತಹಶೀಲ್ದಾರ್ ರವರು ಇದು ಸರ್ಕಾರಿ ಕೆಲಸ ಅಡ್ಡ ಮಾಡಬೇಡ ಎಂದು ಹೇಳಿದರು. ನಂತರ ಹದ್ದುಬಸ್ತು ಮಾಡಿ ಕಲ್ಲು ನೆಟ್ಟೆವು. ದಿಃ17.09.2021 ರಂದು ಕಲ್ಲು ಕಿತ್ತುಹಾಕಿದ್ದಾರೆ

ಎಂದು ತಹಶೀಲ್ದಾರ್ ರವರಿಗೆ ಪಂಚಾಯಿತಿ ಸಿಬ್ಬಂದಿಗಳು ತಿಳಿಸಿದರು. ತಹಶೀಲ್ದಾರ್ ರವರ ಮೌಖಿಕ ಆದೇಶದಂತೆ ಸ್ಥಳಕ್ಕೆ ಹೋಗಿ ನೋಡಲಾಗಿ ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿದ್ದರು. ಹೊಡ ಬಡಾವಣೆಯಾಗಿದ್ದು, ಅದಕ್ಕೆ ವಾಟರ್ ಟ್ಯಾಂಕ್ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದ್ದು, ಅದಕ್ಕೆ ಬಾಜುದಾರರು ನಮಗೂ ಬರಬೇಕು ಎಂದು ತಕರಾರು ಒಡ್ಡಿದ್ದರು. ಪೊಲೀಸರಿಗೆ ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಡಿ.ಆರ್.ಕೆ.ರವರಿಂದ ಃ</u>

01. ಸರ್ವೆ ನಂ-56 ಮತ್ತು 57 ರ ಜಮೀನನ್ನು ಅಳತೆ ಮಾಡಲು ಹೋಗಿದ್ದೆವು. ಸರ್ವೆ ನಂ-57, 2 ನೇ ಆರೋಪಿ ದೇವರಾಜುರವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ್ ರವರ ಆದೇಶದಂತೆ ಸ್ಥಳಕ್ಕೆ ಹೋಗಿದ್ದೆವು. ಭೂ-ಮಾಪಕರು ಬಾಜುದಾರರಿಗೆ ನೋಟೀಸ್ ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ತಹಶೀಲ್ದಾರ್ ರವರು ಯಾವುದೇ ನೋಟೀಸ್ ಕೊಟ್ಟಿಲ್ಲ. ಸರ್ವೆ ನಂ-56 ಮತ್ತು 57 ರ ಮಾಲೀಕರು ದೇವರಾಜು ಎಂಬುದು ನನಗೆ ಗೊತ್ತು. ಪಹಣಿಯಲ್ಲಿ ನೋಡಿದ್ದೇನೆ. ಸರ್ವೆ ನಂ-56 ಮತ್ತು 57 ದೇವರಾಜುರವರಿಗೆ ಸೇರಿದ ಸ್ವತ್ತಾಗಿದ್ದರು, ಅವರಿಗೆ ನೋಟೀಸ್ ಕೊಡದೆ ಏಕಾ ಏಕಿ ಸ್ಥಳಕ್ಕೆ ಹೋಗಿರುವುದು ಕಾನೂನು ಬಾಹಿರ ಎಂದರೆ ನನಗೆ ಗೊತ್ತಿಲ್ಲ. ಭೂ-ಮಾಪಕರು ಅಳತೆ ಮಾಡುವಾಗ ನಾನು ದಾಖಲೆಗೆ ಸಹಿ ಹಾಕಿದ್ದೇನೆ. ಆರೋಪಿಗಳು ಕಲ್ಲು ಕಿತ್ತುಹಾಕಿದ್ದಾರೆ ಎಂದು ನಾನು ಯಾವುದೇ ಬಾವ ಚಿತ್ರ ತೆಗೆದಿಲ್ಲ, ತಹಶೀಲ್ದಾರ್ ರವರಿಗೆ ವರದಿ ಮಾತ್ರ ನೀಡಿದ್ದೇನೆ. ಸದರಿ ವರದಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ, ಪೊಲೀಸರಿಗೂ ಸಹ ಕೊಟ್ಟಿಲ್ಲ. ಆರೋಪಿಗಳು ಸರ್ವೆ ನಂ-56 ಮತ್ತು 57 ರ ಮಾಲೀಕರಾಗಿದ್ದು, ನಾನು, ತಹಶೀಲ್ದಾರ್ ಮತ್ತು ಭೂ-ಮಾಪಕರು ಯಾವುದೇ ಸ್ಥಳ ಗುರುತಿಸಲು ಹೋಗಿಲ್ಲ, ಆರೋಪಿಗಳು ಕಲ್ಲು ಸಹ ಕಿತ್ತು ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಜಮೀನಿನಲ್ಲಿ ಅಳತೆ ಮಾಡಲು ನಮಗೆ ನೋಟಿಸ್ ಕೊಡಬೇಕು ಎಂದು ಕೇಳಿದಾಗ ಆರೋಪಿಗಳ ವಿರುದ್ದ ತಹಶೀಲ್ದಾರ್ ರವರು ಮತ್ತು ನಾವು ಸುಳ್ಳು ದೂರನ್ನು ಚಾ.ಸಾ-1 ರವರ ಮೂಲಕ ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ನಾವು

ಸ್ಥಳದಲ್ಲಿ ಕಲ್ಲು ನೆಟ್ಟಾಗ ಯಾವುದೇ ಬಾವಚಿತ್ರ ತೆಗೆದಿಲ್ಲ. ಈ ಪ್ರಕರಣಕ್ಕು ಆರೋಪಿಗಳಿಗೂ ಯಾವುದೇ ಸಂಬಂದವಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

**C/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.